ದಿವಾಣಿ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ ಸಂಡೂರು.

**OS. No. 139/ 2021** **P.W. 01**

ದಿನಾಂಕ **22-02-2023** ರಂದು ಪ್ರಮಾಣ ವಚನ ಮಾಡಿಸಲಾಯಿತು.

**ಮುಂದುವರೆದ ಪಾಟೀ ಸವಾಲು ಶ್ರೀ ಎಂ ಬಿ ಹೆಚ್ ವಕೀಲರಿಂದ**

* * * *

ದಾವಾ ಸ್ವತ್ತಿನಲ್ಲಿ ಅಕ್ರಮವಾಗಿ ಪ್ರತಿವಾದಿಗಳು ಮನೆ ಕಟ್ಟಿಕೊಂಡಿರುವ ಬಗ್ಗೆ ಸಂಬಂದಪಟ್ಟ ಇಲಾಖೆಗೆ ದೂರನ್ನು ನೀಡಲು ಹೋಗಿದ್ದೆನು ಆದರೆ ಅವರು ಅದನ್ನು ತೆಗೆದುಕೊಂಡಿರುವುದಿಲ್ಲ ಆದರೆ ನಾನು ಬರವಣಿಗೆಯಲ್ಲಿ ದೂರನ್ನು ನೀಡಿರುವುದಿಲ್ಲ. ದಾವಾ ಸ್ವತ್ತಿನಲ್ಲಿ ಪ್ರತಿವಾದಿಗಳು ಎಷ್ಟು ವಿಸ್ತೀರ್ಣದಲ್ಲಿ ಅಕ್ರಮವಾಗಿ ಮನೆಯನ್ನು ಕಟ್ಟಿದ್ದಾರೆ ಎಂದು ನ್ಯಾಯಾಲಯಕ್ಕೆ ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ. ಪ್ರತಿವಾದಿಯವರ ವಿರುದ್ದ ಪೋಲಿಸ ಠಾಣೆಯಲ್ಲಿ ಯಾವುದೆ ದೂರನ್ನು ನೀಡಿರುವುದಿಲ್ಲ. ನಾನು ಒಟ್ಟು 3 ಎಕರೆ 48 ಸೆಂಟ್ಸ ಜಮೀನನ್ನು ಬಸಣ್ಣ ಅವರಿಂದ ಖರೀದಿ ಮಾಡಿರುತ್ತೇನೆ. ಅದರ ಸರ್ವೆ ನಂಬರ 26 ಇರುತ್ತದೆ. ಸದರಿ ಸ್ವತ್ತಿನ ಪೂರ್ವಕ್ಕೆ ಹೊಲ ಆದರೆ ಅವರ ಹೆಸರನ್ನು ನನಗೆ ಹೇಳಲಾಗುವುದಿಲ್ಲ, ಪಶ್ಚಿಮಕ್ಕೆ ಮನೆ ಇರುತ್ತದೆ ಅವರ ಹೆಸರನ್ನು ಸಹ ನನಗೆ ಹೇಳಲಾಗುವುದಿಲ್ಲ, ಉತ್ತರಕ್ಕೆ ಜಂಬಮ್ಮ ಅವರ ಹೊಲ ಮತ್ತು ದಕ್ಷಿಣಕ್ಕೆ ಆಶ್ರಯ ಮನೆಗಳು ಇರುತ್ತವೆ. ದಾವಾ ಸ್ವತ್ತನ್ನು ನಾನು ಖರೀದಿ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ದಾವಾ ಸ್ವತ್ತಿನಲ್ಲಿ ಅಕ್ರಮವಾಗಿ ಪ್ರತಿವಾದಿಗಳು ಮನೆಯನ್ನು ಕಟ್ಟಿರುವುದಿಲ್ಲ ಎಂದರೆ ಸರಿಯಲ್ಲ. ನ್ಯಾಯಾಲಯದಲ್ಲಿ ಹಾಜರುಪಡಿಸಿದ ದಾಖಲೆಗಳು 3 ಎಕರೆ 48 ಸೆಂಟ್ಸಗೆ ಸಂಬದಪಟ್ಟ ದಾಖಲೆ ಆಗಿರುತ್ತವೆ ಮತ್ತು ಅವುಗಳು ದಾವಾ ಸ್ವತ್ತಿಗೆ ಸಂಬಂಪಟ್ಟ ದಾಖಲೆಗಳು ಅಗಿರುವುದಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಗಳು ಸಹಾಯಕ ಆಯುಕ್ತರು ಬಳ್ಳಾರಿ ಅವರು ಮಂಜೂರು ಮಾಡಿರುವ ಜಮೀನಿನಲ್ಲಿ ಆಶ್ರಯ ಮನೆಗಳನ್ನು ಕಟ್ಟಿಕೊಂಡಿರುತ್ತಾರೆ ದಾವಾ ಸ್ವತ್ತಿನಲ್ಲಿ ಅವರು ಮನೆಗಳನ್ನು ಕಟ್ಟಿಕೊಂಡಿರುವುದಿಲ್ಲ ಎಂದರೆ ಸರಿಯಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇದೆ.

ಪ್ರ.ದ.ನ್ಯಾ.ದಂ., ಸಂಡೂರು.